**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.**

**ಸಿ.ಸಿ. ನಂ. 824/2025**

| ಫಿರ್ಯಾದಿಃ- | ವಿರುದ್ಧ | ಆರೋಪಿಃ- |
|---|---|---|
| ಗ್ರಾಮಾಂತರ ಪೊಲೀಸರು, ಸಾಗರ. | | 1. ಶ್ರೀ ಮಿಥುನ್ ಕುಮಾರ್<br>ಬಿನ್ ಜಗನ್ನಾಥ್,<br>ವಯಸ್ಸು ಸುಮಾರು 35 ವರ್ಷ,<br>ಚಾಲಕ,<br>ವಾಸಃ ಸಂಪೆಕ್ಕೈ ಚೆನ್ನಿಗನ<br>ತೋಟ ಗ್ರಾಮ, ಸಾಗರ<br>ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

# ಆಪಾದನೆ

ದಿನಾಂಕಃ 08.02.2025 ರಂದು ರಾತ್ರಿ 10.15 ಗಂಟೆಯ ಸಮಯದಲ್ಲಿ ಸಾಗರ ತಾಲ್ಲೂಕು, ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯ ಸಿರಿವಂತೆ ಗ್ರಾಮದ ಚಿತ್ರಸಿರಿ ಹತ್ತಿರದ ಮಾದೇವಶೆಟ್ಟಿ ರವರ ಜಾಗದ ಮುಂದಿನ ಸಾಗರ-ಹೊನ್ನಾವರ ಎನ್.ಹೆಚ್. 69 ನೇ ರಸ್ತೆಯಲ್ಲಿ ಸಾಕ್ಷಿ-1 ರವರ ತಮ್ಮ ಸಂತೋಷ ರಾಮಚಂದ್ರನಾಯ್ಕ ರವರು ಸಾಕ್ಷಿ-13 ರವರ ಮಾಲೀಕತ್ವದ ಕೆಎ-15/ಇ.ಹೆಚ್. 4215 ರ ಸುಜುಕಿ ಆಕ್ಸೀಸ್ 125 ಸ್ಕೂಟಿಯಲ್ಲಿ ಸಾಗರದಿಂದ ವಾಪಾಸ್ ಊರಿಗೆ ಬರುವಾಗ ತಾಳಗುಪ್ಪ ಕಡೆಯಿಂದ ಆರೋಪಿತನು ತನ್ನ ಮಾಲೀಕತ್ವದ ಕೆಎ-03/ಎಂ.ಜೆ. 3552 ರ ಆಲ್ಟೋ ಕಾರಿನಲ್ಲಿ ಸಾಕ್ಷಿ-2 ರವರನ್ನು ಕೂರಿಸಿಕೊಂಡು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ತನ್ನ ಮುಂದಿನ ವಾಹನವನ್ನು ಓವರ್ ಟೇಕ್ ಮಾಡಿಕೊಂಡು ರಸ್ತೆಯ ಬಲಭಾಗಕ್ಕೆ ಬಂದು ಸಂತೋಷ ರಾಮಚಂದ್ರನಾಯ್ಕನ ಸ್ಕೂಟಿಗೆ ಡಿಕ್ಕಿ ಹೊಡೆಸಿ, ಅಪಘಾತಪಡಿಸಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು, ಮೇಲ್ಕಂಡ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, ಸಾಕ್ಷಿ-2 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 125(ಎ) ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಮೇಲ್ಕಂಡ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ ಸಂತೋಷ್ ರವರಿಗೆ ತೀವ್ರ ತರವಾದ ಪೆಟ್ಟು ಬಿದಿದ್ದು, ಅವರನ್ನು ಸಾಗರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಸಂತೋಷ್ ರವರು ಮೃತಪಟ್ಟಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 106 ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 15.12.2025 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

**(ಚಾಂದಿನಿ ಜಿ.ಯು)**
**1** ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

**ಸಿ.ಸಿ. ನಂ. 824/2025**

ಆರೋಪಿಯ ಹೇಳಿಕೆ

2 ನೇ ಆರೋಪಿಯ ಹೆಸರುಃ ಶ್ರೀ ಮಿಥುನ್ ಕುಮಾರ್ ಬಿನ್ ಜಗನ್ನಾಥ.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದಿಃ 12.12.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

**(ಚಾಂದಿನಿ ಜಿ.ಯು.)**
1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.